## 14. 3.94 ಕೋಟಿ ಅಕ್ರಮ ಪಡಿತರ ಜಪ್ತಿ

ಲಾಕ್‌ಡೌನ್ ಸಂದರ್ಭದಲ್ಲಿ ಬಡವರಿಗೆ ನೀಡಬೇಕಾದ ಪಡಿತರವನ್ನು ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದ್ದ ರೂ.3.94 ಕೋಟಿ ಮೌಲ್ಯದ ಪಡಿತರ ಆಹಾರವನ್ನು ಸರ್ಕಾರ ಜಪ್ತಿ ಮಾಡಿದೆ. ಬಡವರಿಗೆ ಉಚಿತ ಪಡಿತರ ನೀಡಬೇಕಾದ ನ್ಯಾಯ ಬೆಲೆ ಅಂಗಡಿಗಳು ಬಡವರ ಪಾಲಿನ ಪಡಿತರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲು ಯತ್ನಿಸಿ ಉಚಿತ ಪಡಿತರಕ್ಕೂ ಕನ್ನ ಹಾಕಲು ಯತ್ನಿಸಿದ್ದು ಪತ್ತೆಯಾಗಿದೆ. ಲಾಕ್‌ಡೌನ್ ವೇಳೆ ಬಡವರು, ಕೂಲಿ ಹಾಗೂ ವಲಸೆ ಕಾರ್ಮಿಕರು, ಅತಿ ಹೆಚ್ಚು ಸಂಕಷ್ಟಕ್ಕೊಳಗಾಗಿದ್ದರು. ಇಂತಹ ಸಂದರ್ಭದಲ್ಲಿ ಸರ್ಕಾರ ಈ ವಲಯದ ಕಾರ್ಮಿಕರಿಗೆ ಉಚಿತ ಪಡಿತರ ವಿತರಣೆಯನ್ನು ಮಾಡಿದೆ. ಏಪ್ರಿಲ್‌ನಿಂದ ಮೇ ತಿಂಗಳವರೆಗೆ ಉಚಿತವಾಗಿ ಪಡಿತರವನ್ನು ಪೂರೈಸಿದೆ. ಸಮರ್ಪಕವಾಗಿ ಅರ್ಹರಿಗೆ ವಿತರಣೆಯಾಗಿದೆ ಎಂಬುದನ್ನು ಪತ್ತೆ ಮಾಡಲು ಆಹಾರ ಇಲಾಖೆ ಅಧಿಕಾರಿಗಳು ಏಪ್ರಿಲ್, ಮೇ ತಿಂಗಳಲ್ಲಿ ರಾಜ್ಯಾದ್ಯಾಂತ ಸುಮಾರು 10,000 ನ್ಯಾಯ ಅಂಗಡಿಗಳ ಮೇಲೆ ದಾಳಿ ನಡೆಸಿ ತಪಾಸಣೆ ಮಾಡಿದ್ದರು.

ದಾಳಿಯ ನಂತರ ಅಧಿಕಾರಿಗಳು ಇಲಾಖೆಗೆ ನೀಡಿದ ಅಂಕಿಅಂಶ ಪ್ರಕಾರ ಈ ವೇಳೆ ಅಕ್ರಮ ಎಸಗುತ್ತಿದ್ದ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಒಟ್ಟು 1097 ಪ್ರಕರಣ ದಾಖಲಿಸಲಾಗಿದೆ. ನಿಗದಿತ ಪ್ರಮಾಣಕ್ಕಿಂತ ಕಡಿಮೆ ಪಡಿತರ ಸರಬರಾಜು ಮಾಡಿದ 112 ಪಡಿತರ ಅಂಗಡಿಗಳ ಮೇಲೆ ಪ್ರಕರಣಗಳನ್ನು ದಾಖಲಿಸಲಾಗಿದೆ. ಕಡಿಮೆ ಪಡಿತರ ಪೂರೈಸಿರುವ ಜೊತೆಗೆ ಇತರ ಅಕ್ರಮ ಎಸಗಿದ ಪಡಿತರ ಅಂಗಡಿಗಳ ಮೇಲೆ ಸುಮಾರು ರೂ.13.20 ಲಕ್ಷ ದಂಡ ವಿಧಿಸಲಾಗಿದೆ.

ಸುಮಾರು 186 ಪಡಿತರ ಅಂಗಡಿಗಳ ಪರವಾನಿಗಿಯನ್ನು ಅಮಾನತ್ತು ಮಾಡಲಾಗಿದೆ. ಎರಡು ತಿಂಗಳಲ್ಲಿ ಆಹಾರ ಇಲಾಖೆ ಅಕ್ರಮ ಸಾಗಾಟ ಮಾಡುತ್ತಿದ್ದ ಸುಮಾರು ರೂ.3.94 ಕೋಟಿ ಮೌಲ್ಯದ ಪಡಿತರ ಜಪ್ತಿ ಮಾಡಿದೆ. ಈ ಪೈಕಿ 8473.56 ಕ್ವಿಂಟಾಲ್ ಅಕ್ಕಿ, 107.63 ಕ್ವಿಂಟಾಲ್ ಬೇಳೆಕಾಳು, 24024 ಲೀಟರ್ ಅಡುಗೆ ಎಣ್ಣೆ ಜಪ್ತಿ ಮಾಡಿದೆ. ಸುಮಾರು 111.23 ಕ್ವಿಂಟಾಲ್ ಗೋಧಿಯನ್ನು ವಶಪಡಿಸಿಕೊಳ್ಳಲಾಗಿದೆ. ಅಕ್ರಮ ಪಡಿತರ ಸಾಗಾಟ ಮಾಡುತ್ತಿದ್ದ 39 ವಾಹನಗಳನ್ನು ಇಲಾಖೆ ಜಪ್ತಿ ಮಾಡಲಾಗಿದೆ. 70 ಮಂದಿ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಲಾಗಿದ್ದರೆ, 130 ದುಷ್ಕರ್ಮಿಗಳನ್ನು ಬಂಧಿಸಲಾಗಿದೆ. ಒಟ್ಟು 60 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಬಡವರ ಅನ್ನಕ್ಕೆ ಕನ್ನ ಹಾಕಿದವರ ಮೇಲೆ ಇಲಾಖೆ ಕಠಿಣ ಕ್ರಮ ಕೈಗೊಂಡಿದೆ. ಇಲ್ಲಿಯವರೆಗೆ ಸುಮಾರು 10,500 ನ್ಯಾಯಬೆಲೆ ಅಂಗಡಿಗಳ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಿದ್ದೇವೆ. ಅಕ್ರಮ ಎಸಗಿದವರ ಮೇಲೆ ಕ್ರಿಮಿನಲ್ ಕೇಸನ್ನು ದಾಖಲಿಸಲಾಗಿದೆ. ಎಂದು ಆಹಾರ ಸಚಿವರಾದ ಶ್ರೀ ಕೆ.ಗೋಪಾಲಯ್ಯ ತಿಳಿಸಿದ್ದಾರೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:14.07.2020